ಶ್ರೀ ಆರ್. ವೆಂಕಟರಾಮಯ್ಯ.—ಈ ಷಿಷಿಳಿಕ್ಕೆ ಮೊದಲಿದ್ದ ಇಂಪಾರ್ಟೆನ್ಸ್ ಹೊರಟುಹೋಗಿದೆ. ನಾವು ಷಿಷಿಳಿರ ನಿಯಮದ ಪ್ರಕಾರ ಪ್ರಶ್ನೆ ಕೊಡುತ್ತೇವೆ. ಮಂತ್ರಿಗಳಿಗೆ ಏನೋ ಕೆಲಸ ಇರುತ್ತದೆ. ಅವರು ಬೇರೆ ಕಡೆ ಹೋಗಬೇಕಾಗಿದ್ದರೆ, ಸಂಬಂಧಪಟ್ಟ ಪ್ರಶ್ನೆಗಳಿಗೆ ಉತ್ತರವನ್ನು ಇಲ್ಲಿ ಇರುವವರ ಕಡೆ ಕೊಟ್ಟು ಹೋದರೆ ಯಾರಾದರೂ ಅದನ್ನು ಓದಿ ಹೇಳಬಹುದು. ಈ ನಿಯಮದ ಪ್ರಶ್ನೆಗಳಿಗೆ ಸಪ್ಲಿಮೆಂಟರಿ ಕೇಳುವ ಹಾಗೇನೂ ಇಲ್ಲ. ಆದ್ದರಿಂದ ಇವುಗಳ ಬಗ್ಗೆ ಉತ್ತರ ಕೊಟ್ಟು ಹೋದರೆ ಮರ್ಯಾದೆ ಇರುತ್ತದೆ. ಮಂತ್ರಿಗಳಿಗೆ ಪ್ರೈವೇಟ್ ಸೆಕ್ರೆಟರಿಗಳು ಇರುತ್ತಾರೆ, ಬೇಕಾದ ಸಿಬ್ಬಂದಿ ವರ್ಗ ಇರುತ್ತದೆ. ಏಕೆ ಉತ್ತರ ಕೊಡುವುದಕ್ಕೆ ಬೇಜವಾಬ್ದಾರಿ ? ಇದರ ಬಗ್ಗೆ ಒಂದು ಪ್ರೆಸಿಡೆಂಡ್ ಮಾಡಲಿ,

ಛೇರ್ಮನ್.—ಮಾನ್ಯ ವೆಂಕಟರಾಮಯ್ಯನವರೇ, ಮಾನ್ಯ ರಘುಪತಿಯವರು ಅದಕ್ಕೆ ಸರಿಯಾಗಿ ಉತ್ತರ ಹೇಳಿದ್ದಾರೆ. ಈಗಾಗಲೇ ಎಷ್ಟೋ ಉತ್ತರಗಳನ್ನು ಕೊಟ್ಟಿದ್ದಾರೆ. ಕೆಲವಕ್ಕೆ ಮಾತ್ರ ಉತ್ತರ ಬಂದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಇದಕ್ಕೆ ಆನ್ಸರ್ ಕೊಡುತ್ತೀರಾ ?

ಶ್ರೀ ಬಿ. ಸ್ವಾಮಿರಾವ್.—ಉತ್ತರ ಕೊಡುವುದಕ್ಕೆ ಆಗದೇ ತಲೆ ತಪ್ಪಿಸಿಕೊಂಡು ಹೋಗುವುದಕ್ಕೆ ಈ ವ್ಯವಸ್ಥೆ ಇದೆ ಎಂದು ತಿಳಿದುಕೊಳ್ಳಬೇಕಾಗುತ್ತದೆ.

ಛೇರ್ಮನ್.—ಉತ್ತರ ತರಿಸಿಕೊಡುತ್ತಾರೆ.

ಶ್ರೀ ಆರ್. ಎನ್. ನಾಯಕ್.—ನೇ ಸಲ ಪ್ರಸ್ತಾಪ ಮಾಡಿದರೂ ಸಹ ಉತ್ತರ ಸರಿಯಾಗಿ ಬರುತ್ತಿಲ್ಲ ಎಂದರೆ ಇದೇನು ?

ಶ್ರೀ ಬಿ. ಎ. ಉಮಾರಬ್ಬ.—ಮಾನ್ಯ ರಘುಪತಿಯವರು ಬಂದರಿನ ಮಂತ್ರಿ ಯಾಗಿದ್ದಾರೆ ಅವರಿಗೆ ಇದನ್ನೆಲ್ಲಾ ಹೊರಿಸಿ ಹಡಗಿನ ಮಂತ್ರಿ ಮಾಡುತ್ತಿದ್ದೀರಿ ಅಷ್ಟೇ.

ಛೇರ್ಮನ್.—ಉತ್ತರ ತರಿಸಿಕೊಡುತ್ತಾರೆ. ಈಗ ನಾನು ಮಾನ್ಯ ನೀಲಕಂಠಪ್ಪನವರನ್ನು ಕರೆದಿರುತ್ತೇನೆ. ಅವರು ಓದಬೇಕು.

೪) ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಅಮೃತಾಪುರ ಹೋಬಳಿ ನೇರಲಕೆರೆ ಗ್ರಾಮಕ್ಕೆ ಪಶುವೈದ್ಯಶಾಲೆಯನ್ನು ಮಂಜೂರು ಮಾಡುವುದು

ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ತರೀಕೆರೆ ತಾಲ್ಲೂಕಿನಲ್ಲಿ ನಡೆದಿರುವ ಒಂದು ಸತ್ಯ ನಿತ್ಯ ಕತೆಯನ್ನು ಹೇಳಬೇಕಾಗಿದೆ. ಈ ಕರ್ನಾಟಕ ರಾಜ್ಯದ ಚಿಕ್ಕಮಗಳೂರು ಜಿಲ್ಲೆಯಲ್ಲಿ, ತರೀಕೆರೆ ತಾಲ್ಲೂಕಿನಲ್ಲಿ, ಅಮೃತಾಪುರ ಹೋಬಳಿಯಲ್ಲಿ ನೇರಲಕೆರೆ ಎಂಬ ಗ್ರಾಮವಿದೆ. ಈಗ ಗ್ರಾಮಕ್ಕೆ ೧೯೮೨-೮೩ನೇ ಸಾಲಿನಲ್ಲಿ ಆಗಿನ ಕರ್ನಾಟಕ ಸರ್ಕಾರದವರು, ಅಂದರೆ ಗುಂಡೂರಾವ್ ಸರ್ಕಾರದವರು ಅಪ್ಪಿತಪ್ಪಿ ಒಂದು ಪಶುವೈದ್ಯ ಶಾಲೆಯನ್ನು ಮಂಜೂರು ಮಾಡಿದರು. ಅದನ್ನು ನಂಬಿಕೊಂಡು ಈ ಗ್ರಾಮದ ಮುಗ್ಧ ಜನಗಳು ಶ್ರಮಜೀವಿಯಾದ ಒಬ್ಬ ದಾನಿಯನ್ನು ಹಿಡಿದಿಗೆ ಆಸ್ಪತ್ರೆ ಕಟ್ಟಿಡವನ್ನು ಭವ್ಯವಾಗಿ ಕಟ್ಟಿದರು. ಈ ಕಟ್ಟಡ ಕಟ್ಟಿದ ನಂತರ ಇದರ ಉದ್ಘಾಟನೆ ಈಗಿನ ಮತ್ತು ಆಗಿನ ಅದೇ ಖಾತೆಯಲ್ಲಿರುವ ಸಚಿವರಾದಂಥ ಸಿದ್ಧರಾಮಯ್ಯನವರನ್ನು ಹಿಡಿದು ಕೊಂಡು, ಆ ಗ್ರಾಮದ ಜನರು ಇವರನ್ನು ಒಪ್ಪಿಸಿಕೊಂಡು ಕಾರ್ಯಕ್ರಮಗಳನ್ನು ಸಿದ್ಧಪಡಿಸಿ ಕೊಂಡು ಹೋದರು. ಈ ಖಾತೆಯ ಆಗಿನ ಮತ್ತು ಈಗಿನ ಸಚಿವರು ಒಬ್ಬರೇ ಆಗಿದ್ದಾರೆ ಇವರು ಉದ್ಘಾಟನೆಗೆ ಹೋಗುವಾಗ ಸರಕಾರದ ಅಧಿಕಾರಿಗಳು ಇದರ ಮಂಜೂರಾತಿಯನ್ನು ವಾಪಸ್ ತೆಗೆದುಕೊಂಡರು. ಇದರ ಕಥೆ ವಿಚಿತ್ರವಾಗಿದೆ, ಪದೇ ಪದೇ ಇದೇ ಕಥೆಯನ್ನು ಹೇಳುತ್ತಿದ್ದೇನೆ ಕೇಳಿ. ಮಂಜೂರಾತಿಯಾದ ಆಸ್ಪತ್ರೆಯನ್ನು ಪುನಃ ವಾಪಸ್ ತೆಗೆದು ಕೊಂಡಿದ್ದಾರೆ. ಆದರೆ ಕಟ್ಟಡ ಆಗಿದೆ. ಈ ಕಟ್ಟಡದ ಉದ್ಘಾಟನೆ ಸಮಾರಂಭಕ್ಕೆ ಮಾನ್ಯ ಸಚಿವರಾದ ಸಿದ್ಧರಾಮಯ್ಯನವರನ್ನು ಕರೆದುಕೊಂಡು ಹೋದರು. ಸರ್ವಸಿದ್ಧತೆಯನ್ನೂ ಮಾಡಿಕೊಂಡಿದ್ದರು, ಅಂದರೆ ಆಸ್ಪತ್ರೆಗೆ ಹೆಸರು, ಕಲ್ಲಿನಲ್ಲಿ ಪ್ರಾರಂಭ ಉದ್ಘಾಟನೆಯ ಹೆಸರು ಮತ್ತು ಸಚಿವರಾದ ಸಿದ್ಧರಾಮಯ್ಯನವರ ಹೆಸರು ನನ್ನ ಹೆಸರು ಎಲ್ಲಾ ಇದೆ. ಸರಕಾರಿ ಪಶುವೈದ್ಯಶಾಲೆ ಎಂದು ನಾಮಕರಣ ಆಗಿದೆ. ಉದ್ಘಾಟನೆ ಆಗದಿದ್ದರೂ ಕಲ್ಲೂ ಇದೆ. ಇದನ್ನು ಉದ್ಘಾಟನೆ ಮಾಡುವುದಕ್ಕೆ ಮಾನ್ಯ ಸಚಿವರು ಬಂದರು.

ಶ್ರೀ ಬಿ. ಲಕ್ಕಪ್ಪ.—ಅಧ್ಯಕ್ಷರೇ, ನೋಟೀಸ್‌ನಲ್ಲಿ ಏನು ಬರೆದುಕೊಟ್ಟಿದ್ದಾರೆ ಅದನ್ನು ಓದಬೇಕು. ಸುಮ್ಮನೆ ಭಾಷಣ ಮಾಡುವುದು ಸರಿಯಲ್ಲ. ಅದಕ್ಕೆ ಅವಕಾಶ ಕೊಡ ಬಾರದು.

ಛೇರ್ಮನ್.—ಮಾನ್ಯ ನೀಲಕಂಠಪ್ಪನವರೇ ನೇರವಾಗಿ ಓದಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಓದುವುದಕ್ಕೇ ಬಿಡುತ್ತಿಲ್ಲ. ನಾನು ಏನು ಮಾಡಲಿ.

(ಗೊಂದಲ)

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—ಅಲ್ಲಿ ಬರೆದಿರುವುದನ್ನು ಓದಿರಿ.

ಛೇರ್ಮನ್.—ಅಲ್ಲಿರುವುದನ್ನು ಮಾತ್ರ ಓದಿ.

ಶ್ರೀ ಬಿ. ಆರ್. ನೀಲಕಂಠಪ್ಪ.—ಉದ್ಘಾಟನೆಗಾಗಿ ಬಂದ ಸಚಿವರು ಉದ್ಘಾಟನೆಯನ್ನು ಮಾಡದೇ ಇದಕ್ಕೆ ಉತ್ತಮವಾದ ಭವಿಷ್ಯ ಇದೆ. ಖಂಡಿತವಾಗಿ ಮಂಜೂರಾತಿ ಮಾಡಿಕೊಡುತ್ತೇನೆ. ಎಂದು ಸಮಾಧಾನ ಹೇಳಿ, ಉಳಿದ ಸಮಾರಂಭಗಳನ್ನು ಮಾಡಿಕೊಂಡು ಬಂದರು.

ಛೇರ್ಮನ್.—ಅಲ್ಲಿರುವುದನ್ನು ಓದಿರಿ.

†ಶ್ರೀ ಬಿ. ಆರ್. ನೀಲಕಂಠಪ್ಪ.—ಮಾನ್ಯ ಸಚಿವರು ನಮ್ಮ ಕ್ಷೇತ್ರಕ್ಕೆ ಆಗಮಿಸಿ ಆಸ್ಪತ್ರೆಯ ಉದ್ಘಾಟನೆಯ ಕಾರ್ಯಕ್ಕೆ ಹೋಗದೆ ಬೇಡ, ಪುನಃ ನಾನು ಮಂಜೂರಾತಿಯನ್ನು ಕೊಡಿಸಿದ ನಂತರ ದಿನಾಂಕ ಬದಲಾಯಿಸಿ ಇವರ ಉದ್ಘಾಟನೆ ಮಾಡೋಣ ಎಂದು ಸಮಜಾಯಿಸಿ ನೀಡಿ ಉಳಿದ ಕಾರ್ಯಕ್ರಮಗಳನ್ನು ಮಾಡಿಕೊಂಡು ಬಂದರು. ಈ ಬರವಸೆಯನ್ನು ನಂಬದ ನಾನು ಪುನಃ ಇದೇ ಆಗಿನ ಮತ್ತು ಈಗಿನ ಸಚಿವರನ್ನು ಇದೇ ಸಭೆಯಲ್ಲಿ ಪ್ರಶ್ನೆ ಕೇಳಿದಾಗ, ಇದರ ಮಂಜೂರಾತಿಯನ್ನು ೧೯೬೬–೬೭ನೇ ಸಾಲಿನಲ್ಲಿ ಮಾಡುವುದಾಗಿ ಸದನದ ಮೂಲಕನನೆಗೆ ತಿಳಿಸಿದರು. ಆದರೂ ಇಲ್ಲಿಯವರೆಗೆ ಏನೂ ಕಾರ್ಯರೂಪದಲ್ಲಿ ಆಗಿಲ್ಲ. ಇದಕ್ಕೆ ಕಾರಣ ತಿಳಿಸಬೇಕು. ಮಾನ್ಯ ಮುಖ್ಯಮಂತ್ರಿಗಳೂ ಸಹ ಇದರ ಮಂಜೂರಾತಿಯಬಗ್ಗೆ ಗ್ರಾಮಸ್ಥರಿಗೆ ಭರವಸೆ ಕೊಟ್ಟು ಕಾಗದ ಬರೆದಿದ್ದರೂ ಅದು ಕಾರ್ಯಗತವಾಗಿಲ್ಲ.

ಈಗ ತಾವು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದ್ದೀರಿ ಎಂದು ನನ್ನ ಭಾವನೆ ವಿಚಿತ್ರ ಪರಿಸ್ಥಿತಿಗೆ ಸಿಲುಕಿದ್ದೀರಿ ಎಂದು ನನ್ನ ಭಾವನೆ. ಏನೆಂದರೆ ''ಗಂಡಸತ್ತ ನಂತರ ವಿಧವೆಗೆ ಮತ್ತೆ ಮಕ್ಕಳಾಗಂವುದಿಲ್ಲ'' ಎಂಬ ಗಾದೆಯ ಮಾತಿನಂತೆ ನಮ್ಮ ಜನತಾ ಪಕ್ಷದವರು ಜಿಲ್ಲಾ ಪರಿಷತ್ ರಚನೆಯಾದ ನಂತರ, ಪರಿಷತ್ತಿಗೆ ಪೂರ್ಣ ಅಧಿಕಾರ ಕೊಟ್ಟು, ನಂತರ ಏನು ಮಾಡುತ್ತಾರೆ. ಈ ಸದನಕ್ಕೆ ಕೊಟ್ಟ ಮಾತನ್ನು ಉತ್ತರವನ್ನು, ತಾವು ಉಳಿಸಿಕೊಳ್ಳುವಿರಾ ಅಥವಾ ನಿರಾಕರಿಸುವಿರಾ ? ಈ ಆಸ್ಪತ್ರೆಗೆ ಮಂಜೂತಿಯನ್ನು ಕೊಟ್ಟು ಇದನ್ನು ಕಾರ್ಯರೂಪಕ್ಕೆ ತರುವಿರಾ ಎಂದು ಕೇಳುತ್ತೇನೆ.

೨.೦೦ ಪಿ. ಎಂ.

ಶ್ರೀ ಸಿದ್ದರಾಮಯ್ಯ.—ಮಾನ್ಯ ಉಪಾಧ್ಯಕ್ಷರೇ, ತರೀಕೆರೆ ತಾಲ್ಲೂಕಿನ ನೇರಳೆ ಗ್ರಾಮದಲ್ಲಿ ೧೯೬೨-೬೩ ರಲ್ಲಿ ಒಂದು ಗ್ರಾಮೀಣ ಪಶುವೈದ್ಯಶಾಲೆ ಮಂಜೂರಾಗಿತ್ತು. ಆ ದಿನಗಳಲ್ಲಿ ಸಿಬ್ಬಂದಿ ಕೊರತೆ ಇದ್ದ ಕಾರಣ ಮಂಜೂರಾತಿ ಕೊಟ್ಟಿದ್ದುದನ್ನು ಸರ್ಕಾರ ವಾಪಸ್ ಪಡೆಯಿತು. ಸಿಬ್ಬಂದಿ ಕೊರತೆ ಇರುವುದರಿಂದ ಪಶುವೈದ್ಯ ಶಾಲೆಯನ್ನು ಪ್ರಾರಂಭಿಸುವುದರಿಂದ ಪ್ರಯೋಜನವಿಲ್ಲವೆಂದು ಮಂಜೂರಾತಿಯನ್ನು ವಾಪಸ್ ಪಡೆಯಲಾಗಿತ್ತು. ನಾನು ಈ ಇಲಾಖೆಯ ಜವಾಬ್ದಾರಿಯನ್ನು ವಹಿಸಿಕೊಂಡ ಮೇಲೆ ಮಾನ್ಯ ಶಾಸಕರಾದ ಶ್ರೀ ನೀಲಕಂಠಪ್ಪನವರು ನನ್ನ ಹತ್ತಿರ ಬಂದು, ನಮ್ಮ ಕ್ಷೇತ್ರದಲ್ಲಿ ಒಂದು ಪಶುವೈದ್ಯಶಾಲೆ ಮಂಜೂರಾಗಿದೆ, ತಾವು ಅದನ್ನು ಉದ್ಘಾಟನೆ ಮಾಡಬೇಕೆಂದು ಹೇಳಿದರು. ಇವರು ಹೇಳಿದ ಮೇಲೆ ನಾನು ಅಧಿಕಾರಿಗಳನ್ನು ಪಶುವೈದ್ಯ ಶಾಲೆಯು ಮಂಜೂರಾಗಿದೆಯೇ ಇಲ್ಲವೇ ಎಂದು ವಿಚಾರಿಸಿಕೊಂಡೆ, ಮೊದಲು ಮಂಜೂರಾಗಿತ್ತು. ನಂತರ ಸಿಬ್ಬಂದಿ ಕೊರತೆ ಇದ್ದುದರಿಂದ ಮಂಜೂರಾತಿಯನ್ನು ವಾಪಸ್ಸು ಪಡೆಯಲಾಗಿದೆಯೆಂದು ಹೇಳಿದರು. ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಬೇರೆ ಒಂದು ಕಾರ್ಯಕ್ರಮ ವಿದ್ದುದರಿಂದ ಅಲ್ಲಿಗೆ ಹೋಗಿದ್ದೆ. ಆಗ ಪಶುವೈದ್ಯ ಶಾಲೆಗೆ ಮಂಜೂರಾತಿ ಸಿಕ್ಕಿಲ್ಲವಾದ್ದರಿಂದ ಅದನ್ನು ಉದ್ಘಾಟನೆ ಮಾಡುವುದಕ್ಕೆ ಆಗುವುದಿಲ್ಲ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಆಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ವೆಂದು ಹೇಳಿ ಬಂದಿದ್ದೆ. ಹೋದ ಸಾರಿ ಸದನ ನಡೆಯುವಾಗ ಪುನಃ ಮಾನ್ಯ ಸದಸ್ಯರು ಈ ಪಶುವೈದ್ಯ ಶಾಲೆಯನ್ನು ಯಾವಾಗ ಮಂಜೂರು ಮಾಡುತ್ತೀರೆಂದು ಪ್ರಶ್ನೆಯನ್ನು ಹಾಕಿದ್ದರು. ಸಿಬ್ಬಂದಿ ಪೂರೈಕೆಯಾದ ಮೇಲೆ ಅಲ್ಲಿಗೆ ಪಶುವೈದ್ಯ ಶಾಲೆಯನ್ನು ಮಂಜೂರು ಮಾಡುತ್ತೇನೆಂದು ನಾನು ಹೇಳಿದ್ದುದು ನಿಜ. ಆದರೆ, ೧೯೮೭-೮೮ನೇ ಸಾಲಿಗೆ ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡುವ ಅಧಿಕಾರವನ್ನು ಜಿಲ್ಲಾ ಪರಿಷತ್ತಿಗೆ ಕೊಟ್ಟಿರುವುದರಿಂದ, ಇನ್ನು ಮುಂದೆ ಪಶುವೈದ್ಯಶಾಲೆಗಳನ್ನು ಜಿಲ್ಲಾಪರಿಷತ್ತಿನವರೇ ಮಂಜೂರು ಮಾಡುತ್ತಾರೆ. ಜಿಲ್ಲಾ ಪರಿಷತ್ತಿಗೆ ಅಧಿಕಾರ ವರ್ಗಾವಣೆಯಾಗಿರುವುದರಿಂದ ನಾನು ಭರವಸೆ ಕೊಟ್ಟು ತಪ್ಪಿಸಿಕೊಳ್ಳುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಸರ್ಕಾರದ ಹತ್ತಿರ ಅಧಿಕಾರ ಇದ್ದಿದ್ದರೆ ಮಂಜೂರು ಮಾಡಬಹುದಾಗಿತ್ತು. ಮಾನ್ಯ ಸದಸ್ಯರೂ ಸಹ ಜಿಲ್ಲಾ ಪರಿಷತ್ತಿನ ಸದಸ್ಯರಾಗಿರುವುದರಿಂದ, ಜಿಲ್ಲಾ ಪರಿಷತ್ತಿನ ಸಭೆಯಲ್ಲಿ ಮಾತನಾಡಿ ಪಶುವೈದ್ಯಶಾಲೆಯನ್ನು ಮಂಜೂರು ಪಡೆದುಕೊಳ್ಳಬೇಕೆಂಬುದೇ ನನ್ನ ಉತ್ತರ.

ಛೇರ್ಮನ್.—ಮಾನ್ಯ ಶಿವಣ್ಣನವರೇ ತಾವು ಓದಿ,

ಶ್ರೀ ಎಂ. ಶಿವಣ್ಣ.—ನನ್ನ ಹತ್ತಿರ ಎಕ್ಸೆಟ್ರಾ ಕಾಪಿ ಇಲ್ಲ. ಒಂದು ಕಾಪಿ ಕೊಡಿಸಬೇಕು.

ಶ್ರೀ ಎಂ. ರಘುಪತಿ.—ಅವರು ಒಂದು ಕಾಪಿ ಇಟ್ಟುಕೊಳ್ಳಬೇಕಾಗಿತ್ತು.

ಶ್ರೀ ಯು. ಭೂಪತಿ.—ನಮಗೆ ಒಬೊಬ್ಬ ಪ್ರೈವೇಟ್ ಸೆಕ್ರೆಟರಿಯನ್ನು ಕೊಡಿ.

ಶ್ರೀ ಎಂ. ರಘುಪತಿ.—ನಾನೂ ಸದಸ್ಯನಾಗಿ ಕೆಲಸ ಮಾಡಿದ ಅನುಭವ ಇದೆ.

೫) ಬಾಲ ವಿಕಾಸ ಯೋಜನೆಯಲ್ಲಿ ನಡೆಯುತ್ತಿರುವ ಉಪಹಾರ ಕೇಂದ್ರಗಳಿಗೆ ೧೯೮೭-೮೮ನೇ ಸಾಲಿನ ಹಣವನ್ನು ಬಿಡುಗಡೆ ಮಾಡದೇ ಇರುವುದರಿಂದ ತೊಂದರೆಯಾಗಿರುವುದು

ಶ್ರೀ ಸಿ. ಎಂ. ಉದಾಸಿ.—ಕೇಂದ್ರ ಸರ್ಕಾರದ ಮತಿಯಿಂದ ರಾಜ್ಯದಲ್ಲಿ ಬಾಲವಿಕಾಸ ಯೋಜನೆಯಲ್ಲಿ ನಡೆಯತ್ತಿರುವ ಉಪಹಾರ ಕೇಂದ್ರಗಳಿಗೆ ಧನಸಹಾಯ ೧೯೮೭-೮೮ನೇ ಸಾಲಿಗೆ ಬಿಡುಗಡೆ ಮಾಡದೇ ಇರುವುದರಿಂದ ಉಪಹಾರ ಕೇಂದ್ರಗಳ ಶಿಕ್ಷಕಿ, ಆಯಾಗಳಿಗೆ ಸಂಬಳ ಸಿಗದೇ ಇರುವುದು ಹಾಗೂ ಆಹಾರ ಪುರವಟೆ ಮಾಡಿದ ಸಂಸ್ಥೆಗಳಿಗೆ ಹಣ ಸಂದಾಯ ಕಳೆದ ೬ ತಿಂಗಳುಗಳಿಂದ ಆಗದೆ ಇರುವುದು, ಕೆಲವು ತಾಲ್ಲೂಕುಗಳಲ್ಲಿ ಈ ಯೋಜನೆ ಬಂದು ಮಾಡುವ ಪರಿಸ್ಥಿತಿ ಇದ್ದದ್ದು ಸರ್ಕಾರದ ಗಮನಸೆಳೆಯುತ್ತೇನೆ.

ಶ್ರೀ ಜಿ. ಬಸವಣಪ್ಪ.—ಕೇಂದ್ರ ಪುರಸ್ಕೃತ ಗೋಧಿ ಆಧಾರಿತ ಉಪಹಾರ ಕಾರ್ಯಕ್ರಮದಡಿಯಲ್ಲಿ ಉಪಹಾರ ಕೇಂದ್ರಗಳನ್ನು ರಾಜ್ಯ ಏಕೀಕೃತ ಬಾಲವಿಕಾಸ ಯೋಜನೆ ಘಟಕಗಳಲ್ಲಿ ಮಕ್ಕಳ ಮತ್ತು ಗರ್ಭಿಣಿ ಸ್ತ್ರೀಯರ ಉಪಯೋಗಕ್ಕಾಗಿ ೧೯೮೬-೮೭ ರಿಂದ ಪ್ರಾರಂಭಿಸಲಾಗಿದೆ. ಈಗ ರಾಜ್ಯದಲ್ಲಿ ಒಟ್ಟು ೧೩೮೭ ಉಪಹಾರ ಕೇಂದ್ರಗಳು ಮಂಜೂರಾಗಿದ್ದು ಕಾರ್ಯನಿರ್ವಹಿಸುತ್ತಿವೆ.

೧೯೮೭-೮೮ನೇ ವಾರ್ಷಿಕ ಆಯವ್ಯಯದಲ್ಲಿ ಈ ಯೋಜನೆಗೆ ಹಣ ಒದಗಿಸುವುದಿಲ್ಲ ಆದುದರಿಂದ ಈ ಯೋಜನೆಗೆ ೬೯ ಲಕ್ಷ ರೂ. ಗಳನ್ನು ಸಾಧಿಲ್ವಾರು ನಿಧಿಯಿಂದ (ಯೋಜನೆ) ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾ ಪರಿಷತ್ತುಗಳಿಗೆ ಹಣ ಒದಗಿಸಲು ಸರ್ಕಾರಿ ಆದೇಶವನ್ನು ಶೀಘ್ರದಲ್ಲೇ ಹೊರಡಿಸಲಾಗುವುದು.

೬) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಲಹಾ ಸಮಿತಿಗಳನ್ನು ರಚಿಸುವಾಗ ಸ್ಥಳೀಯ ಶಾಸಕರನ್ನು ಕೈಬಿಟ್ಟಿರುವುದು

ಶ್ರೀ ಎಂ. ಶಿವಣ್ಣ.—ರಾಜ್ಯದಲ್ಲಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸಲಹಾ ಸಮಿತಿಗಳನ್ನು ರಚಿಸುವ ಸಂದರ್ಭದಲ್ಲಿ ಸರಕಾರವು ಸ್ಥಳೀಯ ಗಣ್ಯವ್ಯಕ್ತಿಗಳ ಪಟ್ಟಿಯಲ್ಲಿ ಸ್ಥಳೀಯ ಶಾಸಕರನ್ನು ಕೈಬಿಡಲಾಗಿದೆ.

ತಾ. ೧೫-೭-೮೭ ರಂದು ಸರ್ಕಾರವು ಒಂದು ಆದೇಶವನ್ನು ಹೊರಡಿಸಿ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಸದಸ್ಯರು ಹಾಗೂ ಪುರಸಭಾಧ್ಯಕ್ಷರು, ಸ್ಥಳೀಯ ವ್ಯಾಪಾರಸ್ಥರು ಇವರನ್ನು ಸದಸ್ಯರನ್ನಾಗಿ ಮಾಡಲಾಗಿದೆ. ಸ್ಥಳೀಯ ಶಾಸಕರನ್ನು ಈ ಸಲಹಾ ಸಮಿತಿಗಳಲ್ಲಿ ಸೇರಿಸದಿರುವ ಉದ್ದೇಶವೇನೆಂದು